**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.77-2023

ದೋ.ಸಾ. 1
ಫ್ರಾ.ಸಾ. 1
ಪ್ರ.ವ.ಬೊ.ದಿನಾಂಕ. 05-11-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಬಸವರಾಜ |
| ತಂದೆ / ಗಂಡನ ಹೆಸರು | - | ತಿಮ್ಮಪ್ಪ |
| ವಯಸ್ಸು | - | 45 |
| ಉದ್ಯೋಗ | - | ಕೂಲಿಕೆಲಸ |
| ವಾಸ ಸ್ಥಳ | - | ಕೆಚ್ಚೇನಹಳ್ಳಿ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾ.ಸಾ.4 ರಿಂದ 16 ರವರ ಪರಿಚಯ ಇರುತ್ತದೆ. ಅಲ್ಲದೇ ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ನನಗೆ ನಾಲ್ಕು ಜನ ಮಕ್ಕಳಿದ್ದು, ಅವರಲ್ಲಿ ಈ ಪ್ರಕರಣದಲ್ಲಿ ಮೃತಪಟ್ಟ ಬಸವರಾಜ ಕೂಡ ಮಗ ಆಗಿದ್ದು, ಆತ ತೀರಿಕೊಳ್ಳುವ ಪೂರ್ವದಲ್ಲಿ ಜಗಳೂರಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದ. ಆರೋಪಿತರು ನಮ್ಮ ಊರಿನವರೇ ಆಗಿರುತ್ತಾರೆ. ಅಲ್ಲದೇ ಅವರಲ್ಲಿ 1 ನೇ ಆರೋಪಿಯು ಜಗಳೂರಿನ ಸರ್ಕಾರಿ ಆಸ್ಪತ್ರೆಯ ಹತ್ತಿರ ಟೀ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದ. ಅಲ್ಲದೇ ಚಾ.ಸಾ.4 ರವರು 1 ನೇ ಆರೋಪಿಯ ಅಂಗಡಿಯ ಬಳಿ ಹಣ್ಣಿನ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು.

ನನ್ನ ಮಗನು ಕಾಲೇಜಿಗೆ ಹೋಗುತ್ತಿರುವಾಗ ಈಗ ಮೂರು ವರ್ಷದ ಹಿಂದೆ 2 ನೇ ಆರೋಪಿತಳ ಮಗಳನ್ನು ಪ್ರೀತಿಸುತ್ತಿದ್ದ. ಆ ಕುರಿತಾಗಿ 2 ನೇ ಆರೋಪಿತಳು ನಮ್ಮ ಮನೆಗೆ ಎರಡು ಮೂರು ಬಾರಿ ಬಂದು ನಮ್ಮ ಜೊತೆ ಜಗಳವಾಡಿ ನನ್ನ ಮಗನಿಗೆ ಹಲ್ಲೆ ಮಾಡಿ ಹೋಗಿರುತ್ತಾಳೆ. ಆ ಸಮಯದಲ್ಲಿ 2 ನೇ ಆರೋಪಿತಳ ಮಗಳು ಕೂಡ ನನ್ನ ಮಗನಿಗೆ ಪ್ರೀತಿಸುತ್ತಿದ್ದಳು. ಆ ಸಮಯದಲ್ಲಿ ನಾವೆಲ್ಲ ನನ್ನ ಮಗನಿಗೂ ಹಾಗೂ 2 ನೇ ಆರೋಪಿತಳ ಮಗಳಿಗೂ ಬುದ್ದಿವಾದ ಹೇಳಿರುತ್ತೇವೆ.

ಆ ನಂತರ ನನ್ನ ಮಗ ತೀರಿಕೊಂಡ ದಿನ ಮದ್ಯಾಹ್ನ 2-30 ಗಂಟೆ ಸಮಯದಲ್ಲಿ ಆರೋಪಿತರಿಬ್ಬರು ಜಗಳೂರಿನ ಸರ್ಕಾರಿ ಆಸ್ಪತ್ರೆಯ ಬಳಿ ಇರುವ 1 ನೇ ಆರೋಪಿತನ ಅಂಗಡಿಯ ಹತ್ತಿರ ನನ್ನ ಮಗನಿಗೆ ಹೊಡೆ ಬಡೆ ಮಾಡಿ ಎಲ್ಲಿಯಾದರೂ ಹೋಗಿ ಸಾಯಿ ಎಂದು ಬೈದಿರುತ್ತಾರೆ. ಅವರು ನನ್ನ ಮಗ 2 ನೇ ಆರೋಪಿತಳ ಮಗಳನ್ನು ಪ್ರೀತಿಸುತ್ತಿದ್ದ ಕಾರಣದಿಂದಲೇ ಹೊಡೆ ಬಡೆ ಮಾಡಿ ಎಲ್ಲಿಯಾದರೂ ಹೋಗಿ ಸಾಯಿ ಎಂದು ಬೈದಿರುತ್ತಾರೆ. ಈ ವಿಚಾರವನ್ನು ನನಗೆ ಚಾ.ಸಾ.4 ಮತ್ತು 6 ರವರು ನಮ್ಮ ಮನೆಗೆ ಬಂದು ತಿಳಿಸಿರುತ್ತಾರೆ. ಆ ನಂತರ ನನ್ನ ಮಗ ನಮ್ಮ ಮನೆಗೆ ಬಂದಿದ್ದು, ಬಂದಾಗ ಆತ ಒಂದು ರೀತಿಯಲ್ಲಿ ಮೌನವಾಗಿ ಇದ್ದ. ಆ ಸಮಯದಲ್ಲಿ ನಾವು ಇನ್ನೊಂದು ಹೊಸ ಮನೆಯನ್ನು ಕಟ್ಟುತ್ತಿದ್ದು, ಸದರಿ ಮನೆಗೆ ನನ್ನ ಮಗ ಮಲಗಲು ಹೋಗಿರುತ್ತಾನೆ. ನಂತರ ಅದೇ ದಿನ ರಾತ್ರಿ ಸುಮಾರು 9-30 ಯಿಂದ 10-00 ಗಂಟೆ ಸಮಯದಲ್ಲಿ ನನ್ನ ಮಗ

ಒಂದು ಹಗ್ಗದಿಂದ ನೇಣು ಬಿಗಿದುಕೊಂಡು ಹೊಸ ಮನೆಯಲ್ಲಿ ತೀರಿಕೊಂಡಿರುತ್ತಾನೆ. ಆತ ನೇಣು ಹಾಕಿಕೊಂಡಿರುವುದನ್ನು ಚಾ.ಸಾ.6 ರವರು ನೋಡಿ ಓಡಿ ಬಂದು ನಮಗೆ ವಿಷಯ ತಿಳಿಸಿರುತ್ತಾರೆ.

ನಂತರ ನಾವೆಲ್ಲರೂ ನಮ್ಮ ಹಳೆಯ ಮನೆಯಿಂದ ಹೊಸ ಮನೆಗೆ ಓಡಿ ಬಂದಿರುತ್ತೇವೆ. ನಾವು ನೋಡಿದಾಗ ನಡುಮನೆಯಲ್ಲಿ ನನ್ನ ಮಗ ಜಂತಿಗೆ ನೇಣು ಬಿಗಿದುಕೊಂಡು ಇರುವುದು ಕಂಡುಬಂದಿರುತ್ತದೆ. ನಂತರ ಸೇರಿದ ಜನರು ನನ್ನ ಮಗನ ಕುತ್ತಿಗೆಯಿಂದ ಹಗ್ಗವನ್ನು ಕತ್ತರಿಸಿದ್ದು, ನಂತರ ಆತನನ್ನು ಜಗಳೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದ್ದು, ಅಲ್ಲಿ ಆತ ತೀರಿಕೊಂಡಿರುವುದಾಗಿ ವೈದ್ಯರು ತಿಳಿಸಿರುತ್ತಾರೆ. ತದನಂತರ ನಾನು ಠಾಣೆಗೆ ಹೋಗಿ ಮೊದಲು ಯುಡಿಆರ್ ದೂರನ್ನು ಸಲ್ಲಿಸಿರುತ್ತೇನೆ. ಸದರಿ ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ನಂತರ ಪೋಲೀಸರು ಸದರಿ ಆಸ್ಪತ್ರೆಯ ಶವಾಗಾರಕ್ಕೆ ಬಂದು ನನ್ನ ಮಗನ ದೇಹವನ್ನು ಪರಿಶೀಲನೆ ಮಾಡಿ ಶವ ತನಿಖೆ ಮಾಡಿರುತ್ತಾರೆ. ಆ ಸಮಯದಲ್ಲಿ ನನ್ನ ಮಗನ ಮೃತದೇಹದ ಪೋಟೋಗಳನ್ನು ತೆಗೆಯಲಾಗಿರುತ್ತದೆ. ಸದರಿ ಮೂರು ಪೋಟೋಗಳನ್ನು ಕ್ರಮವಾಗಿ ನಿ.ಪಿ.2 ರಿಂದ 4 ಎಂದು ಗುರುತಿಸಲಾಯಿತು. ನಾನು ನನ್ನ ಮಗನ ಶವವನ್ನು ನೋಡಿದಾಗ ಆತನ ಕುತ್ತಿಗೆಯ ಬಳಿ ಉರುಳು ಹಾಕಿಕೊಂಡ ರೀತಿಯ ಗಾಯವಿರುವುದು ಕಂಡುಬಂದಿರುತ್ತದೆ. ತದನಂತರ ನನ್ನ ಮಗನ ಶವ ಪರೀಕ್ಷೆ ಆದ ಬಳಿಕ ಶವವನ್ನು ನಮಗೆ ಹಸ್ತಾಂತರಿಸಿದ್ದು, ನಂತರ ನಮ್ಮ ಮಗನ ಶವವನ್ನು ನಾವು ಅಂತ್ಯಕ್ರಿಯೆ ಮಾಡಿರುತ್ತೇವೆ.

ನನ್ನ ಮಗ ತುಂಬಾ ಸೂಕ್ಷ್ಮ ವ್ಯಕ್ತಿಯಾಗಿದ್ದ. ನಂತರ ಚಾ.ಸಾ.4 ಮತ್ತು 6 ರವರು ನನ್ನ ಮಗನಿಗೆ ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದು ಹೇಳಿದ ಕಾರಣ ಹಾಗೂ ಆತನಿಗೆ ಹೋಗಿ ಸಾಯಿ ಎಂದು ಹೇಳಿದ್ದಾರೆ ಎಂದು ಹೇಳುವ ಕಾರಣದಿಂದ ನಾನು ಪುನಃ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ. ಸದರಿ ದೂರನ್ನು ನಿ.ಪಿ.5 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು.

ನಾನು ನಿ.ಪಿ.5 ರಂತೆ ದೂರು ಸಲ್ಲಿಸಿದ ಬಳಿಕ ಪೋಲೀಸರು ನಮ್ಮ ಮನೆಯ ಹತ್ತಿರ ಬಂದು ನನ್ನ ಮಗ ಉರುಳು ಹಾಕಿಕೊಂಡ ಸ್ಥಳವನ್ನು ಪರಿಶೀಲನೆ ಮಾಡಿ ಅಲ್ಲಿ ಪಂಚನಾಮೆ ಬರೆದು, ದಾಖಲೆ ತಯಾರಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆ ಹಾಗೂ ನಕಾಶೆಯನ್ನು ಕ್ರಮವಾಗಿ ನಿ.ಪಿ.6 ಮತ್ತು 7 ಎಂದು ಹಾಗೂ ಅದರಲ್ಲಿ ಇರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತುಗಳನ್ನು ನಿ.ಪಿ.6(ಎ) ಮತ್ತು 7(ಎ) ಎಂದು ಗುರುತಿಸಲಾಯಿತು. ಅಲ್ಲದೇ ಆ ಸಮಯದಲ್ಲಿ ಪೋಟೋಗಳನ್ನು ಕೂಡ ತೆಗೆಯಲಾಗಿದ್ದು, ಸದರಿ ಪೋಟೋಗಳನ್ನು ಕ್ರಮವಾಗಿ ನಿ.ಪಿ.8 ರಿಂದ 11 ಎಂದು ಗುರುತಿಸಲಾಯಿತು. ಅಲ್ಲದೇ ಆ ಸಮಯದಲ್ಲಿ ನನ್ನ ಮಗ ನೇಣು ಹಾಕಿಕೊಳ್ಳಲು ಬಳಸಿದ ಹಗ್ಗವನ್ನು ಪೋಲೀಸರು ವಶಪಡಿಸಿಕೊಂಡಿದ್ದು, ನಾನು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಒಂದು ಚೀಲದಲ್ಲಿ ಕಟ್ಟಿ ಇಟ್ಟಿರುವ ಒಂದು ಹಗ್ಗವನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು, ಚೀಲವನ್ನು ಮು.ಮಾ.2 ಎಂದು ಗುರುತಿಸಲಾಯಿತು. ನನ್ನ ಮಗ

ನೇಣು ಬಿಗಿದುಕೊಂಡು ಸಾಯಲು ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ಕಾರಣಕರ್ತರಾಗಿರುತ್ತಾರೆ. ಈ ಕುರಿತು ನಾನು ನನ್ನ ಮರುಹೇಳಿಕೆ ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

(ಈ ಹಂತದಲ್ಲಿ ಆರೋಪಿತರು ಅವರ ವಕೀಲರು ಅವರ ತಾಯಿಯ ಆಪರೇಶನ್ ಆದ ಕಾರಣ ಆಸ್ಪತ್ರೆಯಲ್ಲಿ ಇರುವರೆಂದು ನುಡಿದಿರುವ ಕಾರಣ, ಪಾಟೀಸವಾಲನ್ನು ಮುಂದೂಡಲಾಗಿರುತ್ತದೆ. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.11.06 14:54:02 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.77-2023

ದೋ.ಸಾ. 4
ಫ್ರಾ.ಸಾ. 2
ಪ್ರ.ವ.ಬೊ.ದಿನಾಂಕ. 05-11-2025

ಹೆಸರು ಶ್ರೀ/ ಶ್ರೀ ಮತಿ. - ರವಿ
ತಂದೆ / ಗಂಡನ ಹೆಸರು - ದುರುಗಪ್ಪ
ವಯಸ್ಸು - 30
ಉದ್ಯೋಗ - ಹಣ್ಣಿನ ವ್ಯಾಪಾರ
ವಾಸ ಸ್ಥಳ - ಕೆಚ್ಚೇನಹಳ್ಳಿ

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಕಳೆದ ಮೂರು ವರ್ಷಗಳಿಂದ ಜಗಳೂರಿನ ಸರ್ಕಾರಿ ಆಸ್ಪತ್ರೆಯ ಬಳಿ ಹಣ್ಣಿನ ವ್ಯಾಪಾರವನ್ನು ಮಾಡಿಕೊಂಡು ಬರುತ್ತಿದ್ದೇನೆ. ನನಗೆ ಫ್ರಾ.ಸಾ.1, ಚಾ.ಸಾ.5 ರಿಂದ 16 ರವರ ಪರಿಚಯ ಇದ್ದು, ಅವರೆಲ್ಲರೂ ನಮ್ಮ ಊರಿನವರೇ ಆಗಿರುತ್ತಾರೆ. ಅದೇ ರೀತಿ ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿರುತ್ತದೆ. ಅವರಲ್ಲಿ 1 ನೇ ಆರೋಪಿಯು ನನ್ನ ಹಣ್ಣಿನ ಅಂಗಡಿಯಿಂದ ಸ್ವಲ್ಪ ದುಾರದಲ್ಲಿ ಟೀ ಅಂಗಡಿ ಇಟ್ಟುಕೊಂಡು ಬಹಳ ವರ್ಷಗಳಿಂದ ಜೀವನ ನಡೆಸುತ್ತಿದ್ದಾನೆ. ಫ್ರಾ.ಸಾ.1 ರವರ ಮಗ ಮೃತ ಬಸವರಾಜ ಜಗಳೂರಿನ ಪದವಿ ಕಾಲೇಜಿನಲ್ಲಿ ಕಲಿಯುತ್ತಿದ್ದ.

ಕಳೆದ ಮೂರು ವರ್ಷದ ಹಿಂದೆ ಮದ್ಯಾಹ್ನ 2-30 ಗಂಟೆ ಸಮಯದಲ್ಲಿ ಜಗಳೂರಿನ ಸರ್ಕಾರಿ ಆಸ್ಪತ್ರೆಯ ಎದುರು ಆರೋಪಿತರು ಮೃತನ ಜೊತೆ ಜಗಳವಾಡಿ ಆತನಿಗೆ ಹಲ್ಲೆ ಮಾಡುತ್ತಿದ್ದರು. ಆ ಸಮಯದಲ್ಲಿ ಆರೋಪಿತರು ಮೃತನಿಗೆ 1 ನೇ ಆರೋಪಿಯ ಮಗಳನ್ನು ಬಿಡು ಎಂದು ಹೇಳಿ ಬೈಯ್ಯುತ್ತಿದ್ದರು. ನಂತರ ನಾವು ಅವರ ಜಗಳವನ್ನು ಬಿಡಿಸಿ ಆತನನ್ನು ಅಲ್ಲಿಂದ ಕಳುಹಿಸಿರುತ್ತೇವೆ. 1 ನೇ ಆರೋಪಿಯ ಮಗಳಿಗೂ ಮೃತನಿಗೂ ಏನು ಸಂಬಂಧ ಇತ್ತು ಎಂದು ನನಗೆ ತಿಳಿದಿರುವುದಿಲ್ಲ. ನಂತರ ಮೃತ ವಾಪಾಸು ಆತನ ಮನೆಗೆ ಹೋಗಿ ಉರುಳು ಹಾಕಿಕೊಂಡು ತೀರಿಕೊಂಡಿರುತ್ತಾನೆ. ನಂತರ ಮೃತನ ಶವವನ್ನು ಆತನ ಮನೆಯಿಂದ ಆಸ್ಪತ್ರೆಗೆ ತೆಗೆದುಕೊಂಡು ಬರಲಾಗಿದ್ದು, ತದನಂತರ ಫ್ರಾ.ಸಾ.1 ರವರು ದೂರು ನೀಡಲು ಹೋಗಿದ್ದು, ತದನಂತರದ ವಿಚಾರ ನನಗೆ ತಿಳಿದಿರುವುದಿಲ್ಲ. ಮೃತ ಯಾವ ಕಾರಣದಿಂದ ಉರುಳು ಹಾಕಿಕೊಂಡು ತೀರಿಕೊಂಡಿರುತ್ತಾನೆ ಎಂದು ನನಗೆ ತಿಳಿದಿರುವುದಿಲ್ಲ.

ನಾನು ಮೃತ ಬಸವರಾಜನ ದೇಹವನ್ನು ನೋಡಿದ್ದು, ನೋಡಿದಾಗ ಆತನ ಕುತ್ತಿಗೆಯ ಬಳಿ ಉರುಳು ಹಾಕಿಕೊಂಡ ಗಾಯ ಕಂಡುಬಂದಿರುತ್ತದೆ. ಸಾಕ್ಷಿಯು ನಿ.ಪಿ.2 ರಿಂದ 4 ನ್ನು ನೋಡಿ ಮೃತನ ಶವವನ್ನು ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಮೃತ ಬಸವರಾಜ 2 ನೇ ಆರೋಪಿಯ ಮಗಳಾದ ವಿನೋದ ಎನ್ನುವವಳನ್ನು ಪ್ರೀತಿಸುತ್ತಿದ್ದು, ಆಕೆಯು ಕೂಡ ಆತನನ್ನು ಪ್ರೀತಿಸುತ್ತಿದ್ದಳು ಎಂದರೆ ಸರಿ. ಈ ವಿಚಾರ 2 ನೇ ಆರೋಪಿಗೆ ತಿಳಿದು ಆಕೆ ಪದೇ ಪದೇ ಮೃತನ ಮನೆಯ ಬಳಿ ಹೋಗಿ ಆತನ ಜೊತೆ ಜಗಳವಾಡುತ್ತಿದ್ದಳು ಎಂದರೆ ಸರಿ. 1 ನೇ ಆರೋಪಿಯು 2 ನೇ ಆರೋಪಿಯ ಸಂಬಂಧಿಕನಾಗಿದ್ದು, ಸದರಿ ಪ್ರೀತಿಯ ವಿಷಯಕ್ಕೆ ಸಂಬಂಧಿಸಿ ಆತ ಜಗಳೂರಿನಲ್ಲಿ ಮೃತ ಬಸವರಾಜ ಸಿಕ್ಕಾಗ ಆತನಿಗೆ ಬೈಯ್ದು ಹೆದರಿಸುತ್ತಿದ್ದ ಎಂದರೆ ಸರಿ. ಸದರಿ ದಿನ ಕೂಡ ಆರೋಪಿತರು ಬಸವರಾಜನಿಗೆ ಸೂಳೇಮಗನೆ ಎಲ್ಲಿಯಾದರೂ ಹೋಗಿ ಸಾಯಿ ಎಂದು ಹೇಳಿದ ಕಾರಣ ಆತ ಬೇಸರಮಾಡಿಕೊಂಡು ಮನೆಗೆ ಹೋಗಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

(ಈ ಹಂತದಲ್ಲಿ ಆರೋಪಿತರು ಅವರ ವಕೀಲರು ಅವರ ತಾಯಿಯ ಆಪರೇಶನ್ ಆದ ಕಾರಣ ಆಸ್ಪತ್ರೆಯಲ್ಲಿ ಇರುವರೆಂದು ನುಡಿದಿರುವ ಕಾರಣ, ಪಾಟೀಸವಾಲನ್ನು ಮುಂದೂಡಲಾಗಿರುತ್ತದೆ. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.11.06 14:54:10 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.